## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 29.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

### ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ. ಎನ್ ಎಸ್ ರವರಿಂದ

ಯಾವ ವಿಚಾರಕ್ಕೆ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದು ಗೊತ್ತಾ ಎಂದರೆ ಸಾಕ್ಷಿಯು ಗೊತ್ತು ಎಂದು ನುಡಿಯುತ್ತಾರೆ. ನಿಮ್ಮ ವಕೀಲರು ಬರೆದಿರುವ ಪ್ರಮಾಣ ಪತ್ರಕ್ಕೆ ನೀವು ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಮೂಲತಃ ದೊಡ್ಡಕಾಳಯ್ಯ ರವರ ಆಸ್ತಿ ಎಂದರೆ ಸರಿ. ದೊಡ್ಡಕಾಳಯ್ಯ ರವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರುಗಳ ಹೆಸರು ಏನು ಎಂದರೆ ಸಾಕ್ಷಿಯು ರಂಗಯ್ಯ, ಭದ್ರಯ್ಯ, ಚಿಕ್ಕರಂಗಯ್ಯ, ಕೆಂಚಯ್ಯ ಎಂದು ನುಡಿಯುತ್ತಾರೆ. ನೀವು ರಂಗಯ್ಯ ರವರ ಮಗ ಎಂದರೆ ಸರಿ. ದೊಡ್ಡಕಾಳಯ್ಯ ಇದ್ದಾಗಲೇ ದಾವಾ ಅನುಸೂಚಿ ಸ್ವತ್ತು ಮತ್ತು ಇತರೆ ಆಸ್ತಿಗಳನ್ನು ಭಾಗ ಮಾಡಿದ್ದರು ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತು ಭದ್ರಯ್ಯ ರವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಚಿಕ್ಕರಂಗಯ್ಯ ರವರೇ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನೀವು ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಹೇಳಿರುವ ಚಕ್ಕುಬಂದಿಯ ಅಸ್ತಿಯಲ್ಲಿಯೇ ವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚಿಕ್ಕರಂಗಯ್ಯ ರವರೆ ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ತೆಂಗು ಮತ್ತು ಅಡಿಕೆ ಗಿಡಗಳನ್ನು

ವಾದಿಯೇ ಬೆಳೆದಿದ್ದಾರೆ ಎಂದರೆ ಸರಿಯಲ್ಲ. ಎಷ್ಟು ವರ್ಷಗಳ ಹಿಂದೆ ಕೊಳವೆ ಬಾವಿ ತೆರೆದಿದ್ದಾರೆ ಎಂದರೆ ಗೊತ್ತಿಲ್ಲ. IP set ನಂಬರ್ ಏನು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ಕೊಳವೆ ಬಾವಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕೊಳವೆ ಬಾವಿ ಇರುತ್ತದೆ ಎಂದು ತೋರಿಸುವ ಪೊಟೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ತೊಂದರೆ ಇದಿಯಾ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ವಾದಿಯ ತಂದೆ ಭದ್ರಯ್ಯ ರವರ ಹೆಸರಿಗೆ ದಾವಾ ಅನುಸೂಚಿ ಸ್ವತ್ತಿನ ಖಾತೆ ಮತ್ತು ಪಹಣಿ ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರಿಗೆ ಬೇರೆ ಕಡೆ ಜಮೀನು ಬಂದಿರುತ್ತದೆ ಎಂದು ನುಡಿಯುತ್ತಾರೆ. ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೀರಿ ಎಂದರೆ 3 ನೇ ತರಗತಿಯ ವರೆಗೆ ಓದಿದ್ದೇನೆ ಎಂದು ನುಡಿಯುತ್ತಾರೆ. ನಿಮಗೆ ಓದಲು ಮತ್ತು ಬರೆಯಲು ಬರುತ್ತದಾ ಎಂದರೆ ಸಾಕ್ಷಿಯು ಬರುವುದಿಲ್ಲ ಆದರೆ ಸಹಿ ಮಾಡಲು ಬರುತ್ತದೆ ಎಂದು ನುಡಿಯುತ್ತಾರೆ. ಸ.ನಂ.50/7 ಬಿ ರಲ್ಲಿನ ಆರ್ ಟಿ ಸಿ ವಾದಿಯ ತಂದೆ ಭದ್ರಯ್ಯ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಮಾಡಿಕೊಂಡಿರಬಹುದು ಎಂದು ನುಡಿಯುತ್ತಾರೆ. ದೊಡ್ಡಕಾಳಯ್ಯ ರವರ ಮಕ್ಕಳು ಭಾಗ ಮಾಡಿಕೊಂಡಾಗ ದಾವಾ ಅನುಸೂಚಿ ಸ್ವತ್ತು ಭದ್ರಯ್ಯ ರವರ ಹೆಸರಿಗೆ ಬಂದಿದ್ದು ಅವರು ತೀರಿಕೊಂಡಿದ್ದರಿಂದ ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಚಿಕ್ಕರಂಗಯ್ಯ ರವರಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದು ಹೇಳಿದ್ದು, ಯಾವ ವರ್ಷದಲ್ಲಿ ವಿಭಾಗ ಆಗಿರುತ್ತದೆ ಮತ್ತು ಆ ವಿಭಾಗ ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ವಿಭಾಗ ಪತ್ರವನ್ನು ನೀವು ನೋಡಿದ್ದೀರಾ ಎಂದರೆ ನೋಡಿಲ್ಲ ಎಂದು ನುಡಿಯುತ್ತಾ. ಚಿಕ್ಕರಂಗಯ್ಯ ರವರಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದು ನೀವು ಹೇಗೆ ಹೇಳಿದ್ದೀರಿ ಎಂದರೆ ಸಾಕ್ಷಿಯು ಎಲ್ಲರೂ ಅಣ್ಣ ತಮ್ಮಂದಿರು ಹಂಚಿಕೊಂಡಿದ್ದರು, ಪ್ರತಿವಾದಿಗೂ ಕೂಡ ಅಷ್ಟೆ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನೀವು

ಮತ್ತು ಪ್ರತಿವಾದಿಯ ಮಕ್ಕಳು ಚೆನ್ನಾಗಿ ಇದ್ದೀರಿ ಎಂದರೆ ಸರಿ. ನಿಮಗೂ ಮತ್ತು ವಾದಿಗೂ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇದೇ ರೀತಿ ನನ್ನ 3 ಗುಂಟೆ ಜಮೀನನ್ನು ವಾದಿ ಬರೆಸಿಕೊಂಡಿದ್ದಾರೆ ಅದರಿಂದ ಬೇಜಾರಾಗಿರುತ್ತದೆ ಎಂದು ನುಡಿಯುತ್ತಾರೆ. ಯಾವ ಸ.ನಂಬರ್ ನಲ್ಲಿ ನಿಮ್ಮ 3 ಗುಂಟೆ ಆಸ್ತಿಯನ್ನು ವಾದಿಯು ಬರೆಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಮಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಕೂಡ ಪ್ರತಿವಾದಿಯ ವಾರಸುದಾರರು ನಿಮ್ಮ ಜೊತೆ ಚೆನ್ನಾಗಿ ಇರುವುದರಿಂದ ಅವರಿಗೆ ಸಹಾಯ ಮಾಡಲು ನೀವು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಯಾವಾಗಲೂ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.